## ಲಾವೊ ತ್ಸೆ ಪಡೆದ ಉಪದೇಶ



ಚೀನದಲ್ಲಿ ಚಂಗ್ ಚಾವುಂಗ್ ಎಂಬ ಹಿರಿಯ ಸಂತನೊಬ್ಬನಿದ್ದ. ಆತನು ಒಮ್ಮೆ ಅಸ್ವಸ್ಥನಾದ. ಇದನ್ನು ತಿಳಿದು ಲಾವೊ ತ್ಸೆ ಎಂಬ ಸದಾಚಾರ ವ್ಯಕ್ತಿ, ಆ ಸಂತನನ್ನು ಕಾಣಲು ಬಂದ. ಲಾವೊ ತ್ಸೆ ಆ ಹಿರಿಯ ಸಂತನಿಗೆ ಗೌರವ ಸಲ್ಲಿಸಿ ತನಗೇನಾದರೂ ಉಪದೇಶ ನೀಡಬೇಕೆಂದ. ಆ ಸಂತ ಲಾವೊ ತ್ಸೆಯನ್ನು ಕುರಿತು : "ಹುಟ್ಟೂರಿಗೆ ಹೋದಾಗ, ಊರ ಸೀಮೆಗೆ ಬಂದಾಗ ಗಾಡಿಯಿಂದ ಜನರು ಏತಕ್ಕೆ ಇಳಿಯುವರು?" ಎಂದು ಪ್ರಶ್ನಿಸಿದ. ಅದಕ್ಕೆ ಲಾವೊ ತ್ಸೆ, "ನಿಜ, ಜನರು ತಮ್ಮ ಹುಟ್ಟಿದ ಜಾಗವನ್ನು ಮರೆಯಬಾರದು ಎಂಬುದು ಇದರ ಆಶಯ ಇರಬಹುದಲ್ಲವೇ?" ಎಂದು ಉತ್ತರಿಸಿದ. ಆ ವೃದ್ಧ ಸಂತ ಪ್ರಶ್ನಿಸುವುದನ್ನು ಮುಂದುವರಿಸುತ್ತಾ "ನನ್ನ ಬಾಯೊಳಗೆ ಹಲ್ಲು ಇಲ್ಲ. ಆದರೆ ನಾಲಗೆಯು ಇನ್ನೂ ಇದೆಯಲ್ಲ. ಇದು ಏಕೆ ಹೀಗೆ ?" ಎಂದು ಕೇಳಿದನು. ಅದಕ್ಕೆ ಲಾವೊ ತ್ಸೆ, "ಹ್ಞೂ ನಮ್ರತೆಯು ಮಾತ್ರ ಬಾಳುವುದು. ಸೆಟೆದು ನಿಂತ ಹಲ್ಲು ಉದುರಿದೆ ಅಷ್ಟೆ" ಎಂದ.

ಅದನ್ನು ಕೇಳಿ ಆ ಸಂತ ಅತ್ಯಂತ ಸಂತಸದಿಂದ ಲಾವೊ ತ್ಸೆಯನ್ನು ಕುರಿತು, "ನೀನು ಸರಿಯಾಗಿಯೇ ನುಡಿದೆ. ವಿನಯವಂತನಿಗೆ ಗೊತ್ತಿರಬೇಕಾದ ಸದ್ವಿಷಯಗಳೆಲ್ಲವನ್ನೂ ನೀನು ಬಲ್ಲೆ. ಹೀಗಾಗಿ ನಿನಗೆ ಹೆಚ್ಚು ಉಪದೇಶವೇನೂ ಬೇಕಿಲ್ಲ" ಎಂದು ನುಡಿದ.